ಸಂಜೆ ಲಕ್ಷ್ಮಿ ಗುಡಿಸಿ ಒರೆಸಲು ಬಂದಳು. ಮೇಲೆ ನಾನೊಬ್ಬನೇ ಇದ್ದೆ. ಒಂದು ರಾತ್ರಿಯ ಅನುಭವ ಮಾತ್ರವೇ ನನಗೆ ಅವಳಿಂದಾಗಿತ್ತು. ಅವಳ ಸುಂದರವಾದ ಮಾಂಸಗಳಿಂದ ಭಾವುಕವಾದ ಆನಂದವನ್ನು ಇನ್ನೂ ಬಾಚಿ ತೆಗೆಯಬೇಕು...

'ಲಕ್ಷ್ಮಿ...'

ಅವಳು ಮುಖವೆತ್ತಿದಳು.

'ಲಕ್ಷ್ಮಿ, ನೀನು ಇವತ್ತು ರಾತ್ರಿ ಬರುತ್ತಿಯಾ?'

ಉತ್ತರವಿಲ್ಲ.

'ರಾತ್ರಿ ಹನ್ನೊಂದು ಗಂಟೆಗೆ ... ಎಲ್ಲರೂ ನಿದ್ರಿಸಿದಾಗ... ಖಂಡಿತವಾಗಿ ಬರಬೇಕು...'

ಅವಳು ಏನನ್ನೂ ಹೇಳದೆ ನಡೆದು ಮರೆಯಾದಳು. ಮೌನವಾಗಿ ಅವಳು ಸಮ್ಮತಿಸಿರಬೇಕು.

ಸ್ತ್ರೀ ಒಮ್ಮೆ ಒಬ್ಬರ ವಶವಾದರೆ ಮತ್ತೆ ಅವಳು ಯಾವಾಗಲೂ ಅವರಿಗೆ ಅಧೀನವಾಗಿರುತ್ತಾಳೆಂದು ಯಾವುದೋ ಪುಸ್ತಕದಲ್ಲಿ ಓದಿದ್ದನ್ನು ನೆನಪಿಸಿಕೊಂಡೆ.

ಆಟ ಆಡಿ, ಶರ್ಟು, ಪಂಚೆ ಬದಲಿಸಿ ಹೊರಗಿಳಿದೆ. ಹೊರಗೆ ಹೋಗಿ ತುಂಬಾ ದಿನಗಳಾಗಿದ್ದವು.

ಬೀದಿಯಲ್ಲಿ ಒಬ್ಬ ಹಳೆಯ ಗೆಳೆಯನನ್ನು ಕಂಡೆ. ಗೋಪಿ. ನಾವು ಕಾಲೇಜು ದಿನಗಳಲ್ಲಿ ಹಲವು ರಾತ್ರಿ ಪರ್ಯಟನೆಗಳಲ್ಲಿ ಜೊತೆಯಾಗಿ ಭಾಗವಹಿಸಿದವರು.

ಏನಾದರೂ ನಾಲ್ಕು ಮಾತು ಮಾತಾಡಿ ತಪ್ಪಿಸಿಕೊಳ್ಳಬೇಕೆಂದು ಯೋಚಿಸಿದ್ದೆ. ಆದರೆ, ಹಾಗೆ

